ಪೂಸಲು ಜನಾಂಗಕ್ಕೆ ನೀಡಿರುವ ಸೌಲಭ್ಯ

381 (3491) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ತಾಲ್ಲೂಕಿನಲ್ಲಿ ''ಪೂಸಲು ಎಂಬ ಜನಾಂಗ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಜನಾಂಗವನ್ನು ಯಾವರೀತಿ ವರ್ಗೀಕರಿಸಲಾಗಿದೆ?

ಇ) ಸದರಿ ಜನಾಂಗ ಹಾಗೂ ಸೋಲಿಗ ಜನಾಂಗದವರು ಒಂದೇ ಆಗಿದ್ದರೂ ಕೂಡ ಇವರುಗಳಿಗೆ ಸಿಗಬೇಕಾದ ಸೌಲಭ್ಯ ದೊರೆಯದೇ ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಇವರಿಗೆ ಸಿಗಬೇಕಾದ ಸೌಲಭ್ಯವನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಇಲ್ಲಾ.

ಆ) ಪೂಸಲು ಜಾತಿಯು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿರುವುದಿಲ್ಲ.

ಇ) ಮತ್ತು ಈ) ''ಸೋಲಿಗ ಜನಾಂಗವು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿದ್ದು, ಈ ವರ್ಗದಲ್ಲಿ ಸಿಗುವಂತಹ ಸೌಲಭ್ಯ ಪಡೆಯುತ್ತಿದ್ದಾರೆ. ಆದರೆ ''ಪೂಸಲು'' ಜನಾಂಗವು ಸದರಿ ಪಟ್ಟಿಯಲ್ಲಿ ಸೇರಿಲ್ಲದಿರುವುದರಿಂದ ಲಭ್ಯವಿರುವ ಸೌಲಭ್ಯ ಪಡೆಯಲು ಅವಕಾಶವಿರುವುದಿಲ್ಲ. ಸೋಲಿಗ ಹಾಗೂ ಪೂಸಲು ಜನಾಂಗ ಒಂದೇ ಎಂಬ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಶ್ರೀ ಎನ್.ಸಂಪಂಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಮಾನ್ಯಮಂತ್ರಿಗಳು ಒದಗಿಸಿದ್ದಾರೆ, ಅದು ಸಮಾಧಾನವನ್ನು ಕೊಡುವಂತಹ ಉತ್ತರವಾಗಿಲ್ಲ. ನನ್ನ ಕ್ಷೇತ್ರದಲ್ಲಿ ಎರಡರಿಂದ ಮೂರು ಸಾವಿರ ಜನ ''ಪೂಸಲು'' ಜನಾಂಗದವರು ಇದ್ದಾರೆ. ತೆಲುಗು ಗಡಿನಾಡು ಪ್ರದೇಶವಾಗಿರುವುದರಿಂದ ಇವರಿಗೆ ''ಪೂಸಲು'' ಜನಾಂಗವೆಂದು ಕರೆಯುತ್ತಾರೆ. ಪೂಸಲು ಜನಾಂಗದವರು ಮತ್ತು ಮೈಸೂರು ಜಿಲ್ಲೆಯ ಸುತ್ತಮುತ್ತ ಇರತಕ್ಕ ಸೋಲಿಗರು ಒಂದೇ ಎನ್ನುವುದು ನನ್ನ ಭಾವನೆಯಿದೆ. ಏಕೆಂದರೆ ಅವರ ಕಸುಬು ನಮ್ಮಲ್ಲಿರತಕ್ಕ ಪೂಸಲು ಜನಾಂಗದವರ ಕಸುಬು ಎರಡೂ ಒಂದೇ ಆಗಿರುತ್ತದೆ. ಗಡಿನಾಡು ಪ್ರದೇಶವಾದುದರಿಂದ ನಮ್ಮಲ್ಲಿ ಹೆಚ್ಚಿಗೆ ತೆಲುಗಿನಲ್ಲಿಯೇ ಮಾತನಾಡುತ್ತಾರೆ. ತೆಲುಗಿನಲ್ಲಿ ಅವರು ಜಾತಿಗಳನ್ನು ಹೇಳುತ್ತಾರೆ. ಸರ್ಕಾರ ಅವರನ್ನು ಗುರುತಿಸಿ ಈ ಪೂಸಲು ಜನಾಂಗ ಯಾವ ವರ್ಗಕ್ಕೆ ಸೇರುತ್ತದೆ ಅವರಿಗೆ ಯಾವ ಜಾತಿಯ ಪ್ರಮಾಣಪತ್ರವನ್ನು ಕೊಡಬೇಕೆನ್ನುವುದು ಅದರ ಬಗ್ಗೆ ಸರ್ಕಾರ ಇದುವರೆಗೆ ಆಲೋಚನೆ ಮಾಡಲಿಲ್ಲ. ನಮ್ಮ ಕ್ಷೇತ್ರದಲ್ಲಿ 2-3 ಸಾವಿರ ಜನ ಪೂಸಲು ಜನಾಂಗದವರು ಇದ್ದರೆ ಅವರಲ್ಲಿ ವಿದ್ಯಾವಂತರು ಇದ್ದಾರೆ. ಅವರು ಪಾಪ ನೌಕರಿಗಾಗಿ ಅರ್ಜಿಗಳನ್ನು ಹಾಕಿದಾಗ ಅವರು ಯಾವ ಜನಾಂಗದವರು ಎನ್ನತಕ್ಕ ಆಧಾರಗಳು ಇಲ್ಲ. ಆದರೆ ಎರಡು ಮೂರು ಸಾವಿರ ಜನ

ನಮ್ಮಲ್ಲಿದ್ದರೆ, ಇಡೀ ಜಿಲ್ಲೆಯಲ್ಲಿ ಸುಮಾರು ಹತ್ತು ಹನ್ನೆರಡು ಸಾವಿರ ಜನ ಇದ್ದಾರೆ. ಇವರುಗಳ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಹಶೀಲ್ದಾರ್‌ರವರ ಗಮನಕ್ಕೆ ತೆಗೆದುಕೊಂಡು ಹೋಗಿದ್ದಾರೆ, ಅರ್ಜಿಗಳನ್ನು ಕೊಟ್ಟು ಸುಮಾರು ಎರಡು ಮೂರು ವರ್ಷಗಳಿಂದ ಅವರು ಸುತ್ತಾಡುತ್ತಿದ್ದಾರೆ. ಈ ಪೂಸಲು ಜನಾಂಗದವರಿಗೆ ಜಾತಿಯ ಪ್ರಮಾಣಪತ್ರವನ್ನು ಕೊಡತಕ್ಕ ಕೆಲಸವನ್ನು ಸರ್ಕಾರ ಮಾಡಿಲ್ಲ. ನನಗೆ ಕೊಟ್ಟಿರತಕ್ಕ ಉತ್ತರದಲ್ಲಿ ಹೇಳಿದ್ದಾರೆ, ಪೂಸಲು ಜಾತಿಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗ, ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿರುವುದಿಲ್ಲವೆಂದು ಹೇಳಿದ್ದಾರೆ. ಆದರೆ ಇವರು ಯಾವ ವರ್ಗಕ್ಕೆ ಸೇರಿದ್ದಾರೆಂದು ನಾನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಒಂದು ಪಟ್ಟಿ ಇದೆ. ಅದರಲ್ಲಿ ಅವರ ಹೆಸರು ಇಲ್ಲ. ಹಿಂದುಳಿದ ವರ್ಗದವರದು ಒಂದು ಪಟ್ಟಿಯಿದೆ ಅದರಲ್ಲೂ ಅವರ ಹೆಸರು ಇಲ್ಲ. ಇವರನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆನ್ನುವ ಅಭಿಪ್ರಾಯವಿದ್ದರೆ, ಒಂದು ರಾಜ್ಯಮಟ್ಟದ ಸಮಿತಿಯಿದೆ. ಅಲ್ಲಿಗೆ ಅರ್ಜಿ ಕೊಟ್ಟರೆ ಅಲ್ಲಿ ಇದನ್ನು ಪರಿಶೀಲನೆ ಮಾಡಿ ಇವರು ಪರಿಶಿಷ್ಟಜಾತಿ ಅಥವಾ ಪರಿಶಿಷ್ಟವರ್ಗಕ್ಕೆ ಸೇರಿದವರು ಎಂದು ಅವರು ಶಿಫಾರಸ್ಸು ಮಾಡಿದರೆ ಅದನ್ನು ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡುತ್ತೇವೆ. ಹಿಂದುಳಿದ ವರ್ಗದವರ ಪಟ್ಟಿಗೆ ಸೇರಿಸಬೇಕೆನ್ನುವುದಾದರೆ ಈಗ ನಮ್ಮದು ಒಂದು ಶಾಶ್ವತ ಆಯೋಗವಿದೆ, ಆಯೋಗದವರಿಗೆ ಅವರು ಒಂದು ಮನವಿಯನ್ನು ಸಲ್ಲಿಸಬೇಕು. ಅವರು ಪರಿಶೀಲನೆ ಮಾಡಿ ಹಿಂದುಳಿದ ವರ್ಗಕ್ಕೆ ಇವರನ್ನು ಸೇರಿಸಿ ಅಂತ ಅವರು ಶಿಫಾರಸ್ಸು ಮಾಡಿದರೆ ಆಗ ಸರ್ಕಾರ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಎನ್.ಸಂಪಂಗಿ : ಏಕೆಂದರೆ ಇದೇ ಜನಾಂಗದವರು ಸುಮಾರು ಹತ್ತು ಹನ್ನೆರಡು ವರ್ಷಗಳ ಹಿಂದೆ ಅಥವಾ ಐದಾರು ವರ್ಷಗಳ ಹಿಂದೆ ಈ ಜನಾಂಗಕ್ಕೆ ಪರಿಶಿಷ್ಟ ವರ್ಗವೆಂದು ಪ್ರಮಾಣ ಪತ್ರವನ್ನು ಕೊಟ್ಟಿರತಕ್ಕದ್ದು ಬಹಳ ಆಧಾರಗಳು ಇದೆ. ಜಿಲ್ಲೆಯಲ್ಲೂ ಅನೇಕ ಕಡೆ ಕೊಟ್ಟಿದ್ದಾರೆ. ಅದರಲ್ಲೂ ಕೆಲವರು ಪರಿಶಿಷ್ಟ ವರ್ಗದ ಜಾತಿ ಪ್ರಮಾಣ ಪತ್ರವನ್ನು ತೆಗೆದುಕೊಂಡು ಕೆಲವರು ಉದ್ಯೋಗದಲ್ಲಿದ್ದಾರೆ. ಆದರೆ ಕಳೆದ ಎರಡು ಮೂರು ವರ್ಷಗಳಿಂದ ಇದನ್ನು ತಡೆಹಿಡಿಯಲಾಗಿದೆ. ಇದನ್ನು ಮಾನ್ಯ ಸಚಿವರು ಗಮನಿಸಬೇಕು. ಆ ಜಿಲ್ಲೆಯಲ್ಲಿ ಎಲ್ಲೆಲ್ಲಿ ಕೊಟ್ಟಿದ್ದಾರೆ ಅದನ್ನು ತರಿಸಿ ನೋಡಿ, ಈಗ ಏನು ಎರಡು ಮೂರು ಸಾವಿರ ಜನರಿಗೆ ಪ್ರಮಾಣ ಪತ್ರವನ್ನು ಕೊಡುವುದನ್ನು ನಿಲ್ಲಿಸಿದ್ದಾರೆ ಅದನ್ನು ಕೊಡಿಸುವ ಕಡೆ ಮಾನ್ಯ ಸಚಿವರು ಗಮನಹರಿಸಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಪೂಸಲು ಜನಾಂಗದ ಹೆಸರು ಇಲ್ಲದೆ ಯಾರಾದರೂ ಜಾತಿಯ ಪ್ರಮಾಣಪತ್ರವನ್ನು ಕೊಟ್ಟಿದ್ದರೆ ಅದು ಅಕ್ರಮವಾಗುತ್ತದೆ. ಅವರ ವಿರುದ್ಧವಾಗಿ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಹಿಂದೆ ಏಕೆ ಕೊಟ್ಟಿದ್ದಾರೆಂಬುದರ ಬಗ್ಗೆ ವಿಚಾರಣೆಗೆ ಒಳಪಡಿಸುತ್ತೇನೆ. ನಾನೂ ಕೂಡ ರಾಜ್ಯಮಟ್ಟದ ಸಮಿತಿಯ ಮುಂದೆ ಈ ವಿಷಯವನ್ನು ಮಂಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ತೆಲುಗಿನಲ್ಲಿ ಪೂಸಲು ಅಂದರೆ ಕನ್ನಡದಲ್ಲಿ ಮಣಿ ಕೋಣಿಸುವುದು.

ಶ್ರೀ ಕಾಗೋಡು ತಿಮ್ಮಪ್ಪ : ಅವುಗಳೇನು ನಡೆಯುವುದಿಲ್ಲ, ನಮ್ಮ ಪಟ್ಟಿಯಲ್ಲಿ ಹೆಸರು ಇದೆಯೇ ಅದನ್ನು ನೋಡುತ್ತೇವೆ.

ಅಧ್ಯಕ್ಷರು : ಆಯಿತು. ಮುಂದಿನ ಪ್ರಶ್ನೆ ಮಾನ್ಯ ರಾಜುಗೌಡರು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, 385 (3421) ಪ್ರಶ್ನೆಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ವರ್ಗಾಯಿಸಲಾಗಿದೆ.

ದ.ಕನ್ನಡ ಜಿಲ್ಲೆಯಲ್ಲಿರುವ ರೋಗಗ್ರಸ್ತ ಸಣ್ಣ ಕೈಗಾರಿಕೆಗಳು

386 (3459) ಶ್ರೀ ಗೋಪಾಲ ಬಂಡಾರಿ. ಹೆಚ್ (ಕಾರ್ಕಳ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ಮತ್ತು ದ.ಕ. ಜಿಲ್ಲೆಯಲ್ಲಿರುವ ರೋಗಗ್ರಸ್ತ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು).

ಆ) ಉಡುಪಿ ಮತ್ತು ದ.ಕ. ಜಿಲ್ಲೆಯಲ್ಲಿ ಇರುವ ಕೈಗಾರಿಕಾ ಶೆಡ್ಡ್‌ಗಳ ಸಂಖ್ಯೆ ಎಷ್ಟು; ಮತ್ತು ಎಷ್ಟು ವಿತರಣೆ ಆಗಿವೆ; ಎಷ್ಟು ಬಾಕಿ ಇದೆ ವಿತರಣೆ ಆದ ಶೆಡ್ಡುಗಳ ಪೈಕಿ ಎಷ್ಟರಲ್ಲಿ ಕೈಗಾರಿಕೆ ಪ್ರಾರಂಭವಾಗಿದೆ? (ತಾಲ್ಲೂಕುವಾರು ವಿವರ ಒದಗಿಸುವುದು)

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) 81 ರೋಗಗ್ರಸ್ತ ಸಣ್ಣ ಕೈಗಾರಿಕೆಗಳು.
ತಾಲ್ಲೂಕುವಾರು ವಿವರ ಕೆಳಗಿನಂತಿದೆ:-

ಕ್ರ ಸಂ.	ತಾಲ್ಲೂಕಿನ ಹೆಸರು	ರೋಗಗ್ರಸ್ತ ಕೈಗಾರಿಕೆಗಳ ಸಂಖ್ಯೆ
1	2	3
ದಕ್ಷಿಣ ಕನ್ನಡ ಜಿಲ್ಲೆ		
1)	ಮಂಗಳೂರು	41
2)	ಪುತ್ತೂರು	18
3)	ಬೆಳ್ತಂಗಡಿ	2
4)	ಸುಳ್ಯ	8
5)	ಬಂಟ್ವಾಳ	-
ಉಡುಪಿ ಜಿಲ್ಲೆ		
6)	ಉಡುಪಿ	8
7)	ಕುಂದಾಪುರ	9
8)	ಕಾರ್ಕಳ	1
	ಒಟ್ಟು	**81**